

# ಕಸ ಎತ್ತುವ ಕಾಗೆಗಳು!

ಸುಂದರ ನಗರಿ ಫ್ರಾನ್ಸ್‌ನಲ್ಲಿ ಎರಡನೇ ಅತೀ ದೊಡ್ಡ ಉದ್ಯಾನವನವಾದ ಐತಿಹಾಸಿಕ 'ಥೀಮ್ ಪಾರ್ಕ್' ಒಂದು ಸುಂದರ ಹಾಗೂ ಆಕರ್ಷಣೀಯ ಕೇಂದ್ರ. ಪ್ರತೀ ವರ್ಷ ಅಂದಾಜು ಎರಡು ದಶಲಕ್ಷ ಪ್ರವಾಸಿಗರು ಅಲ್ಲಿಗೆ ಭೇಟಿ ನೀಡುತ್ತಾರೆ. ಆದರೆ ಈಗ ಅದು ಮತ್ತೊಂದು ಆಕರ್ಷಣೆಗೆ ಒಳಗಾಗಿದೆ. ಪಾರ್ಕ್‌ನ ವಿಶಾಲ ಜಾಗದಲ್ಲಿ ಎಲ್ಲಿಯಾದರೂ ನೀವು ಕಸ ಚೆಲ್ಲಿದಿರೆಂದರೆ ಆ ಕಸ ತಕ್ಷಣ ಮಾಯವಾಗಿಬಿಡುತ್ತದೆ. ಅಲ್ಲಿನ ಕೆಲಸದವರ ದಕ್ಷತೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಿದ್ದೀರಾ?.. ಕಸವನ್ನು ಮಾಯ ಮಾಡುತ್ತಿರುವುದು ಕೆಲಸಗಾರರಲ್ಲ, ಕಾಗೆಗಳು...!

ಹೌದು, ಥೀಮ್ ಪಾರ್ಕನ ಒಳಾಂಗಣದ ಸ್ವಚ್ಛತೆಯ ಕೆಲಸಕ್ಕೆ ಆರು ಕಾಗೆಗಳ ಬಳಕೆಯಾಗುತ್ತಿದ್ದು ಅವೆಲ್ಲವೂ ಸಾಕಷ್ಟು ತರಬೇತುಗೊಂಡ ಕಪ್ಪು ವರ್ಣದ ಕಾಗೆಗಳು. ಪಾರ್ಕ್‌ನ ಒಳಭಾಗದಲ್ಲಿ ಯಾರಾದರೂ ಪ್ರವಾಸಿಗರು ಸಿಗರೇಟು ತುಂಡುಗಳನ್ನೋ, ಖಾಲಿಯಾದ ತಿಂಡಿ ಪೊಟ್ಟಣಗಳನ್ನೋ ಅಥವಾ ಇನ್ನಿತರೆ ಹಗುರ ಪದಾರ್ಥಗಳನ್ನು ಎಸೆದಿದ್ದರೆ ಕಾಗೆಗಳು ಅವುಗಳನ್ನು ಕೊಕ್ಕಿನಲ್ಲಿ ಹಿಡಿದು ತಂದು ಕಸದ ಬುಟ್ಟಿಗೆ ಹಾಕುತ್ತವೆ.



## ಹಿನ್ನೆಲೆ ಮತ್ತು ತರಬೇತಿ

ಕಾಗೆಗಳನ್ನು ಕಸ ಎತ್ತಿಹಾಕಲು ಬಳಸುವ ಉಪಾಯ ಮೊದಲಿಗೆ ಹೊಳೆದದ್ದು ಕ್ರಿಸ್ಟೋಫೆ ಗ್ಯಾಬೊರಿಟ್ ಎಂಬ ಪಕ್ಷಿ ತರಬೇತುದಾರನಿಗೆ. ಈ ಹಿಂದೆ ರಾಜಾಡಳಿತಗಳಿದ್ದಾಗ ಥೀಮ್ ಪಾರ್ಕ್ ಇದ್ದ ಜಾಗದಲ್ಲಿ ನಡೆಯುತ್ತಿದ್ದ ಫಾಲ್ಕನರಿ ಪ್ರದರ್ಶನಗಳಲ್ಲಿ ಪಳಗಿಸಿ ತರಬೇತುಗೊಳಿಸಿದ ಪಕ್ಷಿಗಳಿಂದ ಗುಲಾಬಿ ಹೂವುಗಳನ್ನು ಹೆಕ್ಕಿತಂದು ಯುವರಾಣಿಯರಿಗೆ ಕೊಡಿಸುವ ಮೋಜಿನ ಪ್ರದರ್ಶನಗಳನ್ನು ನಡೆಸುತ್ತಿದ್ದ ಕುರಿತು ತಿಳಿದ ಗ್ಯಾಬೊರಿಟ್ ತಾನೂ ಸಹ ಪಕ್ಷಿಗಳನ್ನು ಪಳಗಿಸಿ ತರಬೇತುಗೊಳಿಸಲು ಯೋಚಿಸಿದ. ಲಘುವಾಗಿರುವ ಕಸವನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದೆಂಬ ಉಪಾಯ ಆತನಿಗೆ ಹೊಳೆಯಿತು. ಕೂಡಲೇ ಕಾರ್ಯಪ್ರವೃತ್ತನಾದ ಅವನು ತನ್ನ ಬಳಿ ಪಳಗಿದ್ದ ಬೌಬೌ, ಬ್ಯಾಂಬೊ, ಬಿಲ್, ಬ್ಲ್ಯಾಕ್, ಬ್ರಿಕೋಲೆ ಹಾಗೂ ಬಾಕೊ ಹೆಸರಿನ ಆರು ಕಾಗೆಗಳನ್ನು ಬಳಸಿಕೊಳ್ಳಲು ನಿರ್ಧರಿಸಿದ.

ಪಾರ್ಕ್‌ನ ಪ್ರಾಂಗಣದಲ್ಲಿ ಸಣ್ಣ ಸಣ್ಣ ಕಾಗದದ ಚೂರುಗಳನ್ನೆಸೆದು ಅವುಗಳನ್ನು ಹೆಕ್ಕಿ ತರುವಂತೆ ತನ್ನ ಪಕ್ಷಿಗಳಿಗೆ ತರಬೇತು ನೀಡಿದ. ಹಾಗೆ ಹೆಕ್ಕಿ ತಂದ ಪಕ್ಷಿಗೆ ಉತ್ತೇಜಕವಾಗಿ ಕಾಳುಗಳನ್ನು ನೀಡಿ ಸಂತುಷ್ಟಗೊಳಿಸುತ್ತಿದ್ದ. ಕ್ರಮೇಣವಾಗಿ ಸಿಗರೇಟ್ ತುಂಡುಗಳನ್ನು, ಕಸದ ಚೂರು, ಎಲೆ, ಕಡ್ಡಿಯಂತಹ ತ್ಯಾಜ್ಯವನ್ನೂ ಎತ್ತಿ ತಂದುಕೊಡುವ ಅಭ್ಯಾಸ ಮಾಡಿಸಿ, ಅವು ಹೊತ್ತು ತಂದ ತ್ಯಾಜ್ಯವನ್ನು ಬಾಕ್ಸ್ ಒಳಗೆ ಹಾಕುವಂತೆ ತರಬೇತುಗೊಳಿಸಿದ. ಅದಕ್ಕೆ ಅವನು ಬಳಸಿದ ಬಾಕ್ಸ್ ಎರಡು ರಂಧ್ರಗಳನ್ನು ಹೊಂದಿದ್ದು ಒಂದರಲ್ಲಿ ಕಸ ಹಾಕಿದಾಕ್ಷಣ ಮತ್ತೊಂದರಲ್ಲಿ ಪಕ್ಷಿಗಳಿಗೆ ತಿನ್ನಲು ಆಹಾರ ಸಿಗುವ ವ್ಯವಸ್ಥೆ ಮಾಡಿದ. ಆಹಾರದಿಂದ ಉತ್ತೇಜಿತಗೊಂಡ ಕಾಗೆಗಳು ತ್ಯಾಜ್ಯವನ್ನು ಹುಡುಕಿ ಹೆಕ್ಕಿ ತಂದು ಬಾಕ್ಸಿನೊಳಗೆ ಹಾಕುವುದನ್ನು ಹೆಚ್ಚು ಸಂತೋಷದಿಂದ ಮಾಡತೊಡಗಿದವು. ಅಭ್ಯಾಸ ನಿರಂತರವಾದ ಮೇಲೆ ಅವುಗಳನ್ನು ಬಳಸಿ ಪಾರ್ಕ್‌ನ ಸ್ವಚ್ಛತೆಯನ್ನು ಮಾಡತೊಡಗಿದವು.

ಇದೇ ಆಗಸ್ಟ್‌ನಲ್ಲಿ ಪ್ರಾರಂಭಿಸಲಾಗಿರುವ ಈ ಕಾರ್ಯವನ್ನು ವೀಕ್ಷಿಸುವ ಸಲುವಾಗಿ ಈಗ ಪಾರ್ಕ್‌ಗೆ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚಾಗಿದೆ.

★ **ಹರೀಶ್‌ಕುಮಾರ್**